ನಾರಾಯಣ ನಿಮ್ಮ ನಾಮವ ನೆನೆದು ನಾಲಿಗೆ ತುದಿಯಲಿ ಅಮೃತವ
ಸುರಿದು ರಾಮನಾಮದ ಸಾರವ ತಿಳಿದು ಅಚ್ಯುತ ನಾಮವ ಭಕ್ತಿಯಿಂದ
ನೆನೆದು ಅನಂತನಾಮವ ಗುಣಕಥೆ ಕೇಳಿ ಕುಸುಮನಾಭನ ಅಂಗಳದೊಳಗೆ
ಕುಂಕುಮ ಕಸ್ತೂರಿ ಥಳಿಯನೆ ಹಾಕಿ ವೃಂದಾವನಕೆಂದು ಗೋಮಯತಂದು
ಸಾರಿಸಿ ಮುತ್ತಿನ ಚೌಕಳಿ ತುಂಬಿ ಶಂಖ ಚಕ್ರ ಗದಾ ಪದ್ಮಗಳಿಂದ
ಅಲಂಕಾರದಪಂಚಣಗಿ ತುಂಬಿ ಸಕಲ ತೀರ್ಥಗಳೆಂಬೋ ಗಂಗೆಯಲಿ
ಮಿಂದು ದೇವಾಂಗ ಪತಾವಳಿಯನೊಗೆದು ಗಿಂಡೀಲಿ ಉದಕ ಝಾರಿಲಿ
ತುಂಬಿ ನೇಮದಿಂದಲಿ ಶ್ರೀಕೃಷ್ಣ ತುಳಸಿಗೆರೆದು ಅನೇಕ ಜನ್ಮದ ಪಾಪವ
ಕಳೆದು ಪತಾವಳಿಯಲಿ ಬತ್ತಿಯ ಮಾಡಿ ಅಚ್ಚಕರಿ ಆಕಳ ತುಪ್ಪವ ತುಂಬಿ
ಮುತ್ತು ಮಾಣಿಕವೆಂಬೋ ಠಾಣಾದೀವಿಗೆ ದೇವರ ಜಗುಲಿಗೆ ಇದಿರಾಗಿಟ್ಟು
ಗೋವಿಂದಾ ನಿನಗರ್ಪಿತವೆಂದು ಶ್ರೀಕೃಷ್ಣಾ ನಿನಗರ್ಪಿತವೆಂದು
ಪಂಚಾಮೃತದ ಅಭಿಷೇಕಮಾಡಿ ಆಚಮನಂಗಳ ಕೇಶವಗಿಟ್ಟು
ಆಭರಣಂಗಳ ಶ್ರೀಹರಿಗಿಟ್ಟು ಮುಂಗೈಮುರಾರಿ ಮುಕುಂದಗಿಟ್ಟು ಅಂದಿಗಿ
ಪಾಟಲಿ ಗೋವಿಂದಗಿಟ್ಟು ಮುತ್ತಿನವಂಕಿ ವಿಠ್ಠಲಗಿಟ್ಟು ಪಾರಿಜಾತ
ಹೊನ್ನುಹೂ ಮಲ್ಲಿಗೆ ಸಂಪಿಗೆ ಕ್ಯಾದಿಗಿ ದವನ ಮುಂಗೈ ಚೆಲುವ ಮಾಣಿಕ
ಸೂರ್ಯ ಚಂದ್ರರಿಗಿಂತ ಹೆಚ್ಚಾಗಿ ಹೊಳೆವ ಹೊನ್ನ ಹರಿವಾಣ ತಂದಿರಿಸಿ
ಶಾಲ್ಯಾನ್ನ ಸೂಪಗಳ ಬಡಿಸಿ ಪರಮಾನ್ನ ಭಕ್ಷಗಳ ಬಡಿಸಿ ಗಾಯತ್ರಿ
ಮಂತ್ರದಲಿ ಪ್ರೋಕ್ಷಿಸಿ ಜ್ಞಾನದಿಂದ ಪಂಚಪ್ರಾಣನ ಸ್ಮರಿಸಿ ನೈವೇದ್ಯಂಗಳ
ಕ್ರಮದಿಂದ ಬಡಿಸಿ ಶ್ರೀಕೃಷ್ಣಾ ನಿನಗರ್ಪಿತವೆಂದು । ಇತಿ ಮಾನಸ ಪೂಜೆ
ಮಾಡಿದವರಿಗೆ ಅನಂತಾನಂತ ಮುಕ್ತಿಕೊಡುವ ಪುರಂದವಿಠ್ಠಲ ॥